ಶ್ರೀ ಕೆ. ವಿ. ಬೈರೇಗೌಡರು.—ಡಿಸೆಂಬರ್ ಒಂದರ ವೇಳೆಗೆ ಆಖೈರಾಗಿ ಎಲ್ಲವನ್ನೂ ವಜಾಮಾಡುತ್ತೀರಾ?

Mr. SPEAKER.—Why does the Hon'ble Member repeat the question when it has been answered?

ಶ್ರೀ ಕೆ. ವಿ. ಬೈರೇಗೌಡರು.—ಅಲ್ಲಿಯವರೆಗೂ ಇಬ್ಬರು ರೆವಿನ್ಯೂ ಇನ್ಸ್‌ಪೆಕ್ಟರುಗಳು ಇರಬೇಕಾದ ಅವಶ್ಯಕತೆಯಿದೆಯೇ?

ಶ್ರೀ ಟಿ. ಚನ್ನಯ್ಯನವರು.—ಗ್ರಾಮಪಂಚಾಯ್ತಿಗಳ ಚುನಾವಣೆಗಳು ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳ ಚುನಾವಣೆಗಳು ನಡೆಯಬೇಕಾಗಿರುವುದರಿಂದ, ಆ ತಾರೀಖಿನವರೆಗೂ ಅವರನ್ನು ಇಟ್ಟುಕೊಳ್ಳಬೇಕಾಗಿದೆ.

Length of District Board Road of Bangalore District.

Q.—174. **Sri K. V. BYRE GOWDA** (Bangalore North).

Will the Government be pleased to state :—

the length of District Board Roads in Bangalore District (talukwar infomation may kindly be furnished)?

A.—**Sri T. CHANNIAH** (Minister for Public Health and Local Self-Government).—

The length of the several Bangalore District Board IV Class Roads which are maintained through Civil Agency is as noted below :—

		M.	F.
Bangalore North	...	23	3
Bangalore South	...	40	2¼
Dodballapur	...	23	6
Devanahalli	...	19	5
Nelamangala	...	27	1
Magadi	...	30	6
Ramanagaram	...	32	3
Channapatna	...	21	2
Kanakapura	..	6	1
Anekal	...	45	2
Hoskote	...	25	6½
Total	...	295	5¾

The II and III Class Roads of the Board are maintained by the Public Works Department.

The length of them is as noted below :—

		M.	F.
II Class Roads	...	128	3
III Class Roads	...	403	3½

Talukwar details of these roads are not maintained as these are through roads under the control and management of the Public Works Department.

ಶ್ರೀ ಕೆ. ವಿ. ಬೈರೇಗೌಡರು.—ಕೋಡಿಹಳ್ಳಿಯಿಂದ ಹುಳವನ ಹಳ್ಳಿಗೆಹೋಗುವ ರಸ್ತೆ ಎಷ್ಟು ಮೈಲಿ ಇದೆ?

Sri T. CHANNIAH.—Notice; I have no information just now.

ಶ್ರೀ ಕೆ. ವಿ. ಬೈರೇಗೌಡರು.—ಹೊಸಕೋಟೆಯಿಂದ ಮಧುಗಿರಿ ಮಾರ್ಗವಾಗಿ ದೇವನ ಹಳ್ಳಿಗೆ ಹೋಗುವ ರಸ್ತೆ ರಿಪೇರಿಯಾಗಿ ಎಷ್ಟು ದಿವಸವಾಯಿತು?

ಶ್ರೀ ಟಿ. ಚನ್ನಯ್ಯನವರು.—ನೋಟೀಸ್.

ಶ್ರೀ ಕೆ. ವಿ. ಬೈರೇಗೌಡರು.—ಈ ರಸ್ತೆಯಲ್ಲಿ 5-6 ಬಸ್ಸುಗಳು ಓಡಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯನವರು.—ಬಂದಿದೆ.

ಶ್ರೀ ಕೆ. ವಿ. ಬೈರೇಗೌಡರು.—ಇದು ಬರೀಮಣ್ಣಿನ ರಸ್ತೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯನವರು.—ಹೌದು.

ಶ್ರೀ ಕೆ. ವಿ. ಬೈರೇಗೌಡರು.—ಇದನ್ನು ರಿಪೇರಿ ಮಾಡುವುದಕ್ಕೆ ತಕ್ಕಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

Sri T. CHANNIAH.—We will consider it.

Prohibition offences and punishments awarded.

Q.—235. **Sri V. MASIAPPA** (Hiriyur).—

Will the Government be pleased to state :—

(*a*) the number of prohibition offences prosecuted since the introduction of prohibition in the five districts (information may kindly be furnished yearwar and districtwar);

(*b*) the number of them that ended in conviction;

(*c*) the nature of the punishment given;

(*d*) the maximum punishment prescribed under law?

ಗ್ರಂಥಾಲಯದಿಂದ ಹೊರಗೆ ಕೊಂಡೊಯ್ಯಲಾಗುವುದಿಲ್ಲ

A.—**Sri T. CHANNIAH** (Minister for Public Health and Local-self Government).—

(*a*)

District	Enforced by the Excise Department.		Enforced by the Police Department	
	Year 1948-49	Year 1949-50	Year 1950-51	Year 1951-52
Kolar	384	229	1,656	2,033
Kolar Gold Fields			1,446	1,898
Tumkur	251	243	2,164	1,728
Chitaldurg	325	308	1,190	1,565
Shimoga	...	366	1,024	1,836
Chikmagalur	...	213	839	1,429
Hassan	...	...	Wet	300 (For 9
Bangalore	...	...	...	292 Months).
Railways	...	...	214	210
Total ...	960	1,359	8,533	11,291

(*b*) 1948-49 ... 825
1949-50 ... 1,100
1950-51 ... 8,153
1951 52 ... 10,899

(*c*) Fines varying from Re. 1 to Rs. 400 and sentences ranging from "till the rising of the Court" to "3 months R. I.".

(*d*) For offences under Section 4 of the Mysore Prohibition Act, a maximum punishment of two years' imprisonment or with fine of Rs. 5,000 and under Section 5 of the Mysore Prohibition Act, a maximum punishment of six months' imprisonment or fine of Rs. 1,000 is prescribed under the Law.

ಶ್ರೀ ವಿ. ಮುನಿಯಪ್ಪನವರು.—(ಸಿ) ಪ್ರಶ್ನೆಗೆ ಉತ್ತರದಲ್ಲಿ ಒಂದು ರೂಪಾಯಿಂದ ಹಿಡಿದು 400 ರೂಪಾಯಿಗಳವರೆಗೆ ಜುಲ್ಮಾನೆ ಮತ್ತು ಕೋರ್ಟು ಏಳುವವರೆಗೆ ಎಂಬುದರಿಂದ ಹಿಡಿದು 3 ತಿಂಗಳುಗಳ ಕಠಿಣ ಸಜಾಪರ್ಯಂತ ಸಜಾ ಶಿಕ್ಷೆ ಕೊಡಲಾಯಿತೆಂದು ಹೇಳಿದ್ದೀರಿ. ಈ ಪೈಕಿ 400 ರೂಪಾಯಿಗಳ ಜುಲ್ಮಾನೆ ಮತ್ತು 3 ತಿಂಗಳ ಕಠಿಣ ಸಜಾ ಶಿಕ್ಷೆ ವಿಧಿಸಿರುವ ಕೇಸುಗಳ ಸಂಖ್ಯೆಯನ್ನು ತಿಳಿಸುತ್ತೀರಾ?

Mr. SPEAKER.—There is the answer in (b).

ಶ್ರೀ ವಿ. ಮುನಿಯಪ್ಪನವರು.—ನಾನು ಕೇಳುತ್ತಿರುವುದು 400 ರೂಪಾಯಿಗಳ ಜುಲ್ಮಾನೆ ಮತ್ತು 3 ತಿಂಗಳ ಕಠಿಣಶಿಕ್ಷೆ ವಿಧಿಸಲ್ಪಟ್ಟವರೆಷ್ಟು ಜನರು ಎಂದು?

Sri T. CHANNIAH.—We have no information at present.

ಶ್ರೀ ವಿ. ಮುನಿಯಪ್ಪನವರು.—ಹೀಗೆ ಶಿಕ್ಷೆ ವಿಧಿಸುವ ಸಂದರ್ಭದಲ್ಲಿ Exemplary ಶಿಕ್ಷೆ ವಿಧಿಸಿ ಪಾನನಿರೋಧವನ್ನು ಜಾರಿಗೆ ತರಬೇಕೆಂದು ನಿರೋಧ ಸಂಸ್ಥೆಗಳವರಾಗಲಿ, ಸಾರ್ವಜನಿಕರಾಗಲಿ ಸರ್ಕಾರದವರ ಗಮನಕ್ಕೆ ತಂದಿದ್ದಾರೆಯೇ?

ಶ್ರೀ ಟಿ. ಚನ್ನಯ್ಯನವರು.—ತಂದಿದ್ದಾರೆ.

ಶ್ರೀ ವಿ. ಮುನಿಯಪ್ಪನವರು.—ಅದರ ಮೇಲೆ ಏನು ಕಾರ್ಯಕ್ರಮ ಕೈಕೊಂಡಿದ್ದೀರಿ?

Sri T. CHANNIAH.—It is under examination.

ಶ್ರೀ ಜಿ. ದುಗ್ಗಪ್ಪನವರು (ಹೊಳಲ್ಕೆರೆ-ಅನುಸೂಚಿತ ಜಾತಿಗಳು).—ಕಳೆದ ಸಾಲಿನಲ್ಲಿ ಎಕ್ಸೈಜ್ ಡಿಪಾರ್ಟ್‌ಮೆಂಟಿನವರಿಂದ surprise Raids ಒಟ್ಟು ಎಷ್ಟು ನಡೆದಿದೆ?

ಶ್ರೀ ಟಿ. ಚನ್ನಯ್ಯನವರು.—ನೋಟೀಸ್ ಬೇಕು.

ಶ್ರೀ ಜಿ. ದುಗ್ಗಪ್ಪನವರು.—ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಮಾಡಿದ್ದೀರೆಂಬುದನ್ನಾರೂ ಹೇಳುತ್ತೀರಾ.

Mr. SPEAKER.—The Minister wants notice.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು (ಚಿತ್ರದುರ್ಗ).—ಯಾವ ಯಾವ income group ಗಳಲ್ಲಿ ಎಷ್ಟೆಷ್ಟು ಜನರು ತಕ್ಸೀರುಗಳನ್ನು ಮಾಡಿದ್ದಾರೆ?

ಶ್ರೀ ಟಿ. ಚನ್ನಯ್ಯನವರು.—ನೋಟೀಸ್ ಬೇಕು.

ಶ್ರೀ ಬಿ ಎಚ್. ಬೋರಣ್ಣಗೌಡರು.—ಈ ಫೈರ್ಕ್ ಹಾಕಿದ್ದನ್ನು ಕೋರ್ಟಿನ ಹತ್ತಿರವೇ ಹೊರಕ್ಕೆ ಬಿಡದೆ ಅಲ್ಲಿಯೇ ಕೊಡಬೇಕಾದ ಸಂದರ್ಭಗಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ ಚನ್ನಯ್ಯನವರು.—ಇದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಇದರಿಂದ ಈ ಕದ್ದುಮಾರಾಟಮಾಡಿ ಹೆಚ್ಚಿಗೆ ಸಂಪಾದನೆ ಮಾಡುವುದಕ್ಕೆ ಅವಕಾಶವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯನವರು.—ನೋಟೀಸ್.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಇಂಥ ಕೇಸುಗಳಲ್ಲಿ ಹೆಚ್ಚಿಗೆ ಶಿಕ್ಷೆ ಕೊಡುವಂತೆ, ಕಾನೂನು ಪ್ರಕಾರ ಪರಮಾವಧಿ ಶಿಕ್ಷೆಯನ್ನು ಕೊಡುವಂತೆ ಸಲಹೆ ಕೊಡುತ್ತೀರಾ?

ಅಧ್ಯಕ್ಷರು.—ಅಲ್ಲೇ ಹೇಳಿದೆ.